**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ**

**ಸಿ.ಸಿ.ನಂ.404/2016**

**ದಿನಾಂಕ :22.06.2026**

ಪಿರ್ಯಾದುದಾರರು:- ರಾಜ್ಯ ಪೋಲೀಸರು, ಅರಕೆರೆ ಪೋಲಿಸ್ ಠಾಣೆ.

-ವಿರುದ್ದ-

ಆರೋಪಿ:- ತಿಮ್ಮೇಗೌಡ ಬಿನ್ ಲೇಟ್ ತಿಮ್ಮಯ್ಯ
ವಯಸ್ಸು 55 ವರ್ಷಗಳು,
ವಾಸ: ಮಂಡ್ಯಕೊಪ್ಪಲು ಗ್ರಾಮ,
ಅರಕೆರೆ ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರ.1) : ಈ ಮೊಕದ್ದಮೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?

ಉ :

ಪ್ರ.2) ಪ್ರಾಸಾ-5 ಡಾ.ರಾಮಕೃಷ್ಣ/ನಿವೃತ್ತ ಹಿರಿಯ ವೈದ್ಯಾಧಿಕಾರಿ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿ ದಂತೆ ದಿ:02.02.2016 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ಅರಕೆರೆ ಪೊಲೀಸರು ವೆಂಕಟೇಶ್ ಎಂಬ ವ್ಯಕ್ತಿಯನ್ನು ಹಲ್ಲೆಯ ಸಂಬಂಧ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದು, ನಂತರ ನಾನು ಸದರಿ ವೆಂಕಟೇಶ್ ರವರಿಗೆ ನಾನು ಪ್ರಥಮ ಚಿಕಿತ್ಸೆ ನೀಡಿದ್ದು ಅವರಿಗೆ ಎಡಗಣ್ಣಿನ ಹುಬ್ಬಿನ ಮೇಲೆ 1.5 ಸೆಂ.ಮಿ x 0.5 ಸೆ.ಮಿ ಅಳತೆಯ ಹರಿದ ಗಾಯ, ಅದರ ಜೊತೆಗೆ ರಕ್ತವು ಸಹಾ ಹೆಪ್ಪುಗಟ್ಟಿದ್ದು, ಎಡಗಣ್ಣಿನ ಹೊರಭಾಗದಲ್ಲಿ ಎಡಭಾಗದಲ್ಲಿ ಚೂಪಾಗಿ ಕೊಯ್ದುಕೊಂಡು ಹೋಗಿರುವಂತಹ 1.5 ಸೆಂ.ಮಿ ಅಳತೆಯ ಗಾಯ ಆಗಿದ್ದು, ಸದರಿ ಗಾಯವನ್ನು ಶುಚಿಗೊಳಿಸಲು ಹೋದಾಗ ರಕ್ತ ಸ್ರಾವ ಆಗಿದ್ದು, ತಲೆಯ ಹಿಂಭಾಗದಲ್ಲಿ 2 x 2 ಸೆಂ.ಮಿ ಅಳತೆಯ ಊತದ ಗಾಯ ಕಂಡು ಬಂದಿದ್ದು, ಸದರಿ ವ್ಯಕ್ತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್. ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಅಲ್ಲಿಂದ ಬಂದ ವರದಿ ಆಧಾರದ ಮೇಲೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ತಾಜಾ ಹಾಗೂ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.3) ಪ್ರಾಸಾ.6 ಹೇಮಂತ್ ಕುಮಾರ್/ಎ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ03.02.2016 ರಂದು ಬೆಳಗಿನ ಜಾವ ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಅಲ್ಲಿ ಚಾಸಾ.1 ರವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಸಿ.ಸಿ.545/2015 ರಲ್ಲಿ ಸದರಿ ಚಾಸಾ.1 ರವರ ವಿರುದ್ದ ದಸ್ತಗಿರಿ ವಾರಂಟ್ ಇದ್ದು ಸದರಿ ದಸ್ತಗಿರಿ ವಾರಂಟ್ ನಂತೆ ಚಾಸಾ.1 ರವರನ್ನು ನನ್ನ ವಶಕ್ಕೆ ಪಡೆದುಕೊಂಡು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ, ನಂತರ ಮಾನ್ಯ ನ್ಯಾಯಾಲಯದ ಆದೇಶದಂತೆ ಚಾಸಾ.1 ರವರನ್ನು ಕಾರಗೃಹದ ವಶಕ್ಕೆ ಒಪ್ಪಿಸಿ, ನಂತರ ಬೆಳಗ್ಗೆ 5.30 ಗಂಟೆಗೆ ಅರಕೆರೆ ಪೊಲೀಸ್ ಠಾಣೆಗೆ ಹೋಗಿ ಠಾಣಾ ಎಸ್.ಹೆಚ್.ಓ ರವರಿಗೆ ಚಾಸಾ.1 ರವರ ಹೇಳಿಕೆಯನ್ನು ಹಾಜರು ಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.4) ಪ್ರಾಸಾ.7 ಅಜರುದ್ದೀನ್ /ಆರಕ್ಷಕ ನಿರೀಕ್ಷಕರು ರವರು ತಮ್ಮ ಸಾಕ್ಷ್ಯದಲ್ಲಿಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 27.07.2016 ರಂದು ನಾನು ಈ ಪ್ರಕರಣದ ಕಡತವನ್ನುಚಾಸಾ.10 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದು, ಅದೇ ದಿನ ಚಾಸಾ.1 ರವರಿಗೆ ಸಂಬಂಧಿಸಿದಂತೆ ಸಿಸಿ.545/2015 ರಲ್ಲಿ ವಾರೆಂಟ್ ಇದ್ದು ಸದರಿ ವಾರೆಂಟ್ ಆಧಾರದ ಮೇಲೆ ಚಾಸಾ.1 ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಮೇರೆಗೆ ಆ ಬಗ್ಗೆ ನ್ಯಾಯಾಲಯದ ಆರ್ಡರ್ ಶೀಟ್, ವಾರೆಂಟ್ ಅನ್ನು ಪಡೆದು, ಚಾಸಾ.1 ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ಚಾಸಾ.10 ರವರ ವರದಿಯನು ಪಡೆದು ದಿಃ 31.10.2016 ರಂದು ಚಾಸಾ.1 ರವರಿಗೆ ಸಂಬಂಧಿಸಿದ ಗಾಯ ಪ್ರಮಾಣಪತ್ರವನ್ನು ಚಾಸಾ.8 ರವರಿಂದ ಸ್ವೀಕರಿಸಿ ಪರಿಶೀಲಿಸಿ ನನ್ನ ಕಡತಕ್ಕೆ ಅಳವಡಿಸಿ, ದಿಃ 07.11.2016 ರಂದು ಚಾಸಾ.7 ರವರಿಂದ ಕೃತ್ಯ ನಡೆಸಲಾದ ಕರನಿರ್ಧರಣಾ ಪಟ್ಟಿಯನ್ನು ಸ್ವೀಕರಿಸಿ ನನ್ನ ಕಡತಕ್ಕೆ ಅಳವಡಿಸಿ, ಚಾಸಾ-10 ರವರಿಂದ ಎಂ.ಓ-1 ಅನ್ನು ಸ್ವೀಕರಿಸಿ ಪರಿಶೀಲಿಸಿ , ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಧಾರಗಳು ಇದ್ದುದರಿಂದ ನ್ಯಾಯಾಲಯಕ್ಕೆ ದೋಷಾಪರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ 5) ಈ ಕೇಸಿನ ಬಗ್ಗೆ ನೀವು ಇನ್ನೂ ಹೇಳುವುದು ಏನಾದರೂ ಇದೆಯಾ?

ಉಃ

ಪ್ರ.6) ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ? ಅವರ ವಿಚಾರಣೆ ಆಗಬೇಕೆ?

ಉಃ

ಪ್ರ.7)ನಿಮ್ಮ ಪರ ದಾಖಲೆಗಳು ಏನಾದರೂ ಇದೆಯಾ? ಅವುಗಳನ್ನು ಹಾಜರುಪಡಿಸಿಸುವಿರಾ?

ಉಃ

ಮೇಲ್ಕಂಡ ಸಾಕ್ಷಿದಾರರ ಹೇಳಿಕೆಗಳನ್ನು ತೆರೆದ ನ್ಯಾಯಲಯದಲ್ಲಿ ನನ್ನ ಎದುರು ಆರೋಪಿಗೆ ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ ಹೇಳಲಾಗಿದೆ ಹಾಗೂ ಆರೋಪಿತನು ಹೇಳಿದ ಉತ್ತರಗಳನ್ನು ಯಥವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ
ದಂಡಾಧಿಕಾರಿಯವರು, ಶ್ರೀರಂಗಪಟ್ಟಣ

ಆರೋಪಿತನ ಸಹಿಃ